ಕಡೆ ಬರುವಂಥದ್ದು ಏನಿತ್ತಪ್ಪಾ ಅಂತ ಕೇಳಿದ. ಆಗ ರುದ್ರಗೊಮಾರ, ಸ್ವಾಮಿ ನಮ್ಮಪ್ಪ ಮುತ್ತಿನ ಬುಡ, ಚಿನ್ನದ ಗಿಡ, ಪಚ್ಚೆ ತೆನೆ, ಇರುವಂಥ ವೃಕ್ಷನ ಕಣ್ಣಾರೆ ನೋಡಬೇಕು ಅಂತೇಳಿ ಇಚ್ಛೆ ಪಟ್ಟವರೇ. ಅದು ಎಲ್ಲಿದ್ರೂ ಸರಿ ತಗಂಡೋಗನ ಅಂತ ಬಂದಿರುವೆವು. ಅದು ನಮ್ಮ ನೇತ್ರಕ್ಕೆ ಕಾಣಂಗಿಲ್ಲ, ವಾಪಸು ಹೋಗಂಗಿಲ್ಲ, ತಂದೆ ಆಸೆ ನೆರವೇರಂಗಿಲ್ಲ, ಇಂಥಾ ಪರಿಸ್ಥಿತಿಯಾಗಿದೆ ನಮ್ಮದು ಅಂತ ಹೇಳಿದರು.

ಋಷಿ ಮುನಿ ಆಗ ಏಳು ಕಲ್ಲು ಮಂತ್ರಿಸಿ ಭದ್ರಗೊಮಾರನ ಕೈಗೆ ಕೊಟ್ಟು 'ಅಪ್ಪಾ ಮಗನೇ ನೋಡಿದರೆ ನೀನು ತೇಜೋವಂತನಾಗಿ ಕಾಣಿಸ್ತಾ ಇದ್ದೀಯಾ. ಇಲ್ಲಿಗೆ ಏಳು ಗಾವುದ ದೂರದಲ್ಲಿ ಹೆಬ್ಬಾಲದ ಮರವುಂಟು. ಅಲ್ಲೋಗಿ ಅದರ ಬೀಳೆಲ್ಲ ಕಿತ್ತು ಏಳು ಮಟ್ಟಿನ ಒಂದು ಹಗ್ಗ ಮಾಡಿಕೋ. ಮುಂದೆ ಹೋದರೆ ಪಾತಾಳ ಮಾರ್ಗ ಕಾಣಿಸ್ತದೆ. ಅದರೊಳಗೆ ಬೆಂಕಿ. ಒಂದು ಕಲ್ಲರಳು ಎಸಿ. ಆಮೇಲೆ ರಾಕ್ಷಸರು. ಅಲ್ಲೊಂದು ಮಂತ್ರದ ಕಲ್ಲು ಹಾಕು. ಕಾಡಸಿದ್ಧರು ಬಂದರೆ ಇನ್ನೊಂದು ಕಲ್ಲು. ಮುಂದಕ್ಕೆ ಹೋದರೆ ಅಲ್ಲೊಬ್ಬ ರಾಜಕುಮಾರಿ ಇರುವಳು. ಅವಳ ಹಿಂದೆ ಒಬ್ಬಳು ಬ್ರಹ್ಮರಾಕ್ಷಸಿ. ಆ ರಾಕ್ಷಸಿಯಿಂದ ಆಚೆ ನೋಡಪ್ಪಾ ನೀವು ತಡಕಿಬಂದಂಥಾ ವೃಕ್ಷ ಉಂಟು. ಅದನ್ನೂ ತರುವುದು ಕಷ್ಟವೇ! ನಿಮ್ಮ ನೆತ್ತಿಯಲ್ಲಿ ದೇವರು ಬರದಂಗೆ ಆಗಲಿ, ಹೋಗಿಬನ್ನಿ ಕಂದಗಳಾ ಅಂದು ಋಷಿಮುನಿ ಮೂವರನ್ನೂ ಮುಂದಕ್ಕೆ ಕಳಿಸಿಕೊಟ್ಟ. ರುದ್ರಗೊಮಾರ, ರೈತಗೊಮಾರರಿದ್ದು ಇದೆಲ್ಲಿ ಸವಾಸ ಬಂತಪ್ಪಾ, ಪಾತಾಳ ಮಾರ್ಗವೆಲ್ಲಿ, ಬ್ರಹ್ಮರಾಕ್ಷಸಿಯೆಲ್ಲಿ. ನಾವು ವಾಪಾಸು ಹೋಗಾನ ಅಂತ ಮಾತಾಡಿಕೊಂಡರು. ಆಗ ಭದ್ರಗೊಮಾರನು, ಸ್ವಾಮಿಗಳಾ ನೀವು ನನಕೂಡೆ ಬಂದು ಪಾತಾಳದ ಬಾಗಿಲಲ್ಲಿ ಇರಿ. ನಾನು ಕೆಳಗಡೆ ಹೋಗಿ ಆ ಮುತ್ತಿನ ವೃಕ್ಷ ತರುತ್ತೀನಿ, ಅಂತ ಧೈರ್ಯದ ಮಾತಾಡಿ ಅವರನ್ನು ಮುಂದೆ ಮುಂದೆ ಕರೆದುಕೊಂಡು ಹೋದ.

★★★

ಏಳು ಗಾವುದ ದೂರ ಬಂದಲ್ಲಿ ಅಲ್ಲಿದ್ದಂಥ ದೊಡ್ಡ ಬಂಡೆ ಮೇಲೆ ಭದ್ರಗೊಮಾರ ಋಷಿಮುನಿ ಕೊಟ್ಟಿದ್ದ ಕಲ್ಲರಳು ಮಂತ್ರಿಸಿ ಹಾಕಿದ. ಬಂಡೆ ಎದ್ದು ಪಾತಾಳ ಮಾರ್ಗ ಕಾಣಿಸಿತು. ಅಲ್ಲಿಗೆ ಹಗ್ಗದ ಮಿಣಿ ಬಿಟ್ಟ. ಬಿಟ್ಟವನೇ ಅಪ್ಪಾ ರಾಜಕುಮಾರ್ರಾ ನೀವು ಯಾರಾದರೂ ಒಬ್ಬರು ಪಾತಾಳದ ಕಡೆ ಹೋಗಿ ಆ ವೃಕ್ಷನ ತಗಂಡು ಬನ್ನಿ ಹೆಂಗೂ ಮಂತ್ರಿಸಿದ ಕಲ್ಲರಳು ಉಂಟಲ್ಲ ಇಕಳ್ಳಿ ಎಂದ. ಆಗ ರುದ್ರಗೊಮಾರ ಹಂಗೋ ಸಮಾಚಾರ ಅಂದುಕೊಂಡು ಪಾತಾಳ ಮಾರ್ಗದಲ್ಲಿ ಏಳೆಂಟು ಹೆಜ್ಜೆ ಇಟ್ಟ. ಹೋದರೆ ಎತ್ಲ ಕಡೇನೂ ಕತ್ಲೆನೆ! ಅಯ್ಯೋ ಇದೆಲ್ಲಿ ಗ್ರಾಚಾರ, ಹಾವು ಚೇಳು ಕಚ್ಚಿಬಿಟ್ರೇನಪ್ಪಾ ಗತಿ ಅಂತ ಮೇಲೆ ಬಂದು ಆ ಮರವೂ ಬೇಡ, ಈ ಪಾತಾಳವೂ ಬೇಡ ನಡಿಯಪ್ಪಾ ತಮ್ಮಾ ಅಂದ. ರೈತಗೊಮಾರ ಅಣ್ಣಾ ನೀನೇ ಹಿಂಗಂದ ಮೇಲೆ ನಂದೇನು ನಡಿ ಅಂದುಬಿಟ್ಟ.

ಆಗ ಭದ್ರಗೊಮಾರ ಈ ಹುಡುಗರು ಹೆಂಬೇಡಿಗಳಂತೆ ಆಡುತ್ತಿರುವರಲ್ಲ ಅಂದು, ಈ ಹಗ್ಗದ ಮಿಣಿನ ಭದ್ರವಾಗಿ ಹಿಡಕಳ್ಳಿ, ನಾನು ಈ ಮಾರ್ಗ ಇಳಿದುಹೋಗಿ ವೃಕ್ಷನ ತಗಂಡು ಬರ್ತೀನಿ ಅಂದು ಪಾತಾಳ ಲೋಕಕ್ಕೆ ಇಳಿದುಬಿಟ್ಟ. ಅಲ್ಲಿ ಹೋದರೆ ಬೆಂಕಿ ಭಗ ಭಗ ಉರಿತಿತ್ತು. ಕಲ್ಲರಳು ಹಾಕಿದ. ಅಲ್ಲಿಂದ ಮುಂದೆ ಕ್ವಾರೆಹಲ್ಲು ಮೀಸೆ ಬಿಟ್ಟಂಡ ರಾಕ್ಷಸರು. ಅವರನ್ನೂ ದಾಟಿಕೊಂಡು ಹೋದಲ್ಲಿ ಒಬ್ಬ ಹೆಣ್ಣುಮಗಳು ಕಂಡಳು. ಅವಳು ಅಪ್ಪಾ ನೀನು ಯಾವ ದೇಶದ ರಾಜಕುಮಾರನೋ ಏನೋ, ಸೂರ್ಯಚಂದ್ರರು ಹೊಳೆದಂಗೆ ಹೊಳೆಯುತ್ತಿರುವೆ. ನಿನ್ನ